ವ್ಯಾಪಾರ ಆಗಲಿ ಬಿಡಲಿ ಪ್ರತಿ ಸಂಜೆ ಗಾಡಿ ಹಾಕುವುದನ್ನು ಆಗಲೇ ಆರಂಭಿಸಿದ್ದರು. ಪ್ರತಿದಿನವೂ ಬಂದು ಗಾಡಿ ಹಾಕಿದರೆ, ಆ ಜಾಗವನ್ನು ಇತರರು ಕಸಿದುಕೊಳ್ಳುವುದು ಕಷ್ಟ. ಇವೆಲ್ಲವೂ ಬೀದಿ ವ್ಯಾಪಾರದ ಅಲಿಖಿತ ನಿಯಮಗಳು. ಇಲ್ಲಿಯ ಎಲ್ಲ ವ್ಯಾಪಾರಿಗಳು ಬಹುಶಃ ತಮ್ಮ ತಮ್ಮಲ್ಲಿಯೇ ಮಾಡಿಕೊಂಡ ಒಪ್ಪಂದ. ಹಾಗೆಂದೇ ದಿನವೂ ತಪ್ಪದೆ ಸಂಜೆ ಬಂದು ಸ್ಟಾಲ್ ಹಾಕಲು ತೊಡಗಿದ್ದರು.

ಮಾರುತಿ ಮಂದಿರದ ಎದುರುಗಡೆಯೇ ಆಪ್ಪಾ ಕುಂಭಾರ್ದರೆ ಅವರ ಅಂಗಡಿ ಇತ್ತು. ಅವರಿಂದ ಭಾವೇಶ್ ದಿನಸಿ ತೆಗೆದುಕೊಂಡು ಬರುತ್ತಿದ್ದರು. ಅವರು ಮತ್ತು ಅವರ ಮಗ ಪ್ರಭಾಕರ್, ಭಾವೇಶ್ ಅವರನ್ನು ಬಹಳಷ್ಟು ಸ್ನೇಹದಿಂದ ಕಾಣುತ್ತಿದ್ದರು. ಅಲ್ಲಿ ಹತ್ತಿರವಾಗಿ 'ಸಪ್ನಾ ಹೋಟೆಲ್' ಇತ್ತು. ಅದರ ಮಾಲೀಕ ರಾಜೇಶ್ ಕುಂಭಾರ್ದರೆ ಆ ದಿನಗಳಲ್ಲಿ ಶಿವಸೇನೆಯ ಶಾಖಾ ಪ್ರಮುಖರಾಗಿದ್ದರು. ಅವರೊಡನೆ ಹತ್ತಿರದ 'ಅನುಪಮ್ ಹೋಟೆಲ್' ಮಾಲೀಕರಾದ ವಿಜಯ್ ನಾಯ್ಡು ಅವರು ಇದ್ದರು. ಗೋಪಾಲ್ ವಾಘ್ದರೆ ಎಂಬುವವರೂ ಇದ್ದರು. ಇವರೆಲ್ಲರೂ 'ಭಾವೇಶ್‌ಗೆ ತೊಂದರೆ ಮಾಡಬೇಡಿ' ಎಂದು ಬೀದಿ ವ್ಯಾಪಾರಿಗಳಿಗೆ ಬುದ್ಧಿ ಹೇಳುತ್ತಿದ್ದರು. ಒಂದಿಷ್ಟು ಸಮಯ ಕಿರುಕುಳ ಸ್ವಲ್ಪ ಕಡಮೆ ಏನೋ ಆಯಿತು. ಆದರೆ ಕಿರುಕುಳ ಕೊಡುವುದೇನೂ ಪೂರ್ಣವಾಗಿ ನಿಲ್ಲಲಿಲ್ಲ. ಸಂತೆಯೊಳಗೊಂದು ಮನೆಯ ಮಾಡಿ ಶಬ್ದಕ್ಕೆ ನಾಚಿದೊಡೆಂತಯ್ಯ ಎಂಬಂತೆ ಬೀದಿಬದಿಯಲ್ಲಿ ಸ್ಟಾಲ್ ಹಾಕಿ, ಕಿರಿಕಿರಿಗೆ ಅಂಜುವಂತಿರಲಿಲ್ಲ.

ಕೆಲವೊಮ್ಮೆ ಭಾವೇಶ್ ಅವರ ಗಾಡಿಯನ್ನು ಚರಂಡಿಯೊಳಕ್ಕೆ ತಳ್ಳಿ ಬಿಡುತ್ತಿದ್ದರು. ಆಗ ಹತ್ತಿರದಲ್ಲಿದ್ದ ಪ್ರವಾಸಿಗರು ಮುಂದೆ ಬಂದು ಸಹಾಯ ಮಾಡುತ್ತಿದ್ದರು. ಅವರ ಗಾಡಿಯನ್ನು ಮತ್ತೆ ಎತ್ತಿ ನಿಲ್ಲಿಸುತ್ತಿದ್ದರು. ನೆಲದ ಮೇಲೆ ಚೆಲ್ಲಿ ಹರಡಿ ಬಿದ್ದ ಮೋಂಬತ್ತಿಗಳನ್ನು ಎತ್ತಿ ಕೊಡುವರು. ಆದರೆ ಬಹಳಷ್ಟು ಮೋಂಬತ್ತಿಗಳು ಮುರಿದುಹೋಗಿ ನಷ್ಟವಾಗುತ್ತಿತ್ತು. ಬದುಕು ನಿಜಕ್ಕೂ ಹೋರಾಟವಾಗಿತ್ತು. ಭಿಕ್ಷೆ ಬೇಡಿದರೆ ಕನಿಕರದಿಂದ ಕಾಸು ಹಾಕುವ ಜಗತ್ತು, ದುಡಿಯಲು ನಿಂತರೆ ಕಂದರಕ್ಕೆ ತಳ್ಳಲು ತುಡಿಯುತ್ತಿತ್ತು.

ಭಾವೇಶ್ ಮಾರುತಿ ಮಂದಿರದ ಟ್ರಸ್ಟಿಗಳ ಬಳಿಗೆ ಹೋಗಿ ದೂರು ನೀಡಿದ್ದರು. ಅವರಿಂದಲೂ ಒಂದಿಷ್ಟು ಆಶ್ವಾಸನೆ ಸಿಕ್ಕಿತು. ಅವರು ಎಲ್ಲ ಬೀದಿ ವ್ಯಾಪಾರಿಗಳನ್ನು ಚೆನ್ನಾಗಿ ಬೈಯ್ದು, 'ನಿಮಗೆ ಮಂದಿರದ ಎದುರು ಸ್ಟಾಲ್ ಹಾಕಬೇಕು ಎಂದಿದ್ದರೆ, ಭಾವೇಶ್‌ಗೆ ಕಿರುಕುಳ ಕೊಡುವುದು ನಿಲ್ಲಿಸಬೇಕು' ಎಂದು ತಾಕೀತು ಮಾಡುತ್ತಿದ್ದರು. ಇಷ್ಟಾಗಿಯೂ ಕಿರುಕುಳ ಮುಂದುವರೆದಾಗ ಪೊಲೀಸ್ ಠಾಣೆಗೆ ಹೋಗಿ ದೂರು ಕೊಡಬೇಕಾಗುತ್ತಿತ್ತು. ಅಲ್ಲಿಂದ ಒಬ್ಬ ಕಾನ್‌ಸ್ಟೇಬಲ್ ಬಂದು ಅವರೆಲ್ಲರಿಗೂ ಬೈಯ್ದು, 'ಇನ್ನೊಮ್ಮೆ ಈ ಕುರುಡ ವ್ಯಕ್ತಿಗೆ ನೀವು ಕಿರುಕುಳ ಕೊಡುವಂತಿಲ್ಲ' ಎಂದು ಗದರಿ ಹೋಗುತ್ತಿದ್ದರು. ಬಗಲಲ್ಲಿ ಒಂದು 'ಗಾಂಧಿ ಫೋಟೊ ಸ್ಟುಡಿಯೊ' ಇತ್ತು. ಅದರ ಮಾಲೀಕ ಶಿರೀಷ್‌ಭಾಯಿ ಮತ್ತು ಅವರ ಪೂರ್ಣ ಪರಿವಾರ ಆ ದಿನಗಳಿಂದಲೇ ಭಾವೇಶ್ ಅವರಿಗೆ ಸಹಾಯ ಮಾಡಲು ಆರಂಭಿಸಿತ್ತು. ಶಿರೀಷ್ ಮಹಾಬಲೇಶ್ವರದ ರೋಟರಿ ಕ್ಲಬ್‌ನ ಅಧ್ಯಕ್ಷರಾಗಿದ್ದರು. ಅವರು ಖುದ್ದಾಗಿ ತಮ್ಮ ಅಂಗಡಿಗೆ ಬಂದ ಪ್ರವಾಸಿಗರನ್ನು ಭಾವೇಶ್ ಅವರ ಕೈಗಾಡಿಯತ್ತ ಕರೆದುಕೊಂಡು ಬರುತ್ತಿದ್ದರು.

ಭಾವೇಶ್ ಅವರಿಗೆ ತಿಳಿದಿತ್ತು, ಪೊಲೀಸು ಪೇದೆಯಾಗಲಿ, ಈ ಎಲ್ಲ ಹಿರಿಯರಾಗಲಿ ದಿನವೂ ನಿಂತು ತನ್ನನ್ನು ಕಾದು ಪೊರೆಯಲು ಸಾಧ್ಯವಿಲ್ಲ. ದಿನದಿನದ ಸಂಘರ್ಷಗಳನ್ನು ತಾನು ಎದುರಿಸಲೇಬೇಕು. ಇವೆಲ್ಲಕ್ಕೂ ಮನಸ್ಸು ಗಟ್ಟಿ ಮಾಡಿಕೊಂಡು, ಯಾರು ಏನಾದರೂ ಬೈಯ್ದುಕೊಳ್ಳಲಿ, ನಾನು ಪ್ರತಿ ಸಂಜೆ ಐದು ಗಂಟೆಗಳ ಕಾಲ ನನ್ನ ಕೈಗಾಡಿಯೊಡನೆ ಈ ಬಜಾರಿನಲ್ಲಿ ನಿಂತೇ ನಿಲ್ಲುತ್ತೇನೆ ಎಂದು ದೃಢ ನಿರ್ಧಾರ ಮಾಡಿದರು. 'ಕಬೀರಾ ಖಡಾ ಬಜಾರ್ ಮೆ, ಮಾಂಗೆ ಸಬಕಿ ಖೈರ್. ನಾ ಕಾಹೂ ಸೇ ದೋಸ್ತಿ, ನಾ ಕಾಹೂ ಸೇ ವೈರ್' ಎಂಬಂತಿತ್ತು ಅವರ ಸಂಕಲ್ಪ. ಸಂತೆಯಲ್ಲಿ ನಿಂತು ಎಲ್ಲರ ಒಳಿತನ್ನೇ ಬಯಸಿದರು, ಯಾರ ವೈರವೂ ಬೇಡವೆಂದರು. ಅವರವರ ಬದುಕಿನ ಹೋರಾಟದತ್ತಲೂ ಕನಿಕರದಿಂದಲೇ ನೋಡಿದರು.

ಇವೆಲ್ಲದರ ಜೊತೆಯಲ್ಲಿ ಮತ್ತೊಂದು ಮುಜುಗರವೂ ಇತ್ತು. ಮುಂಬಯಿಯಿಂದ ಅನೇಕ ಸ್ನೇಹಿತರು, ಸಂಬಂಧಿಗಳು ಮಹಾಬಲೇಶ್ವರ ಕ್ಕೆ ಬರುತ್ತಿದ್ದರು. ಅವರಿಗೂ ಭಾವೇಶ್ ಬೀದಿಯ ಬದಿಯಲ್ಲಿ ತಳ್ಳುಗಾಡಿಯಲ್ಲಿ ಮಾರಾಟ ಮಾಡುವುದನ್ನು ನೋಡಿ ಅಸಮಾಧಾನ ವಾಗುತ್ತಿತ್ತು. ಅವರು ಬಯಸಿದರೂ ಸಹಾಯ ಮಾಡುವುದು ಕಷ್ಟವಿತ್ತು. ಕಾರಣ ತಾಯಿಯ ಅನಾರೋಗ್ಯದ ಸಮಯದಲ್ಲಿ ಅವರೆಲ್ಲರಿಂದ ಭಾವೇಶ್ ಬಹಳಷ್ಟು ಸಾಲ ತೆಗೆದುಕೊಂಡಿದ್ದರು. ಈಗ ಅವರಾರೂ ಸಹಾಯ ಮಾಡಲು ಸಿದ್ಧವಿರ ಲಿಲ್ಲ. ಭಾವೇಶ್ ಅವರಿಗೂ ಈಗ ಅವರಿಂದ ಯಾವುದೇ ಸಹಾಯ ತೆಗೆದುಕೊಳ್ಳಲು ಮನಸ್ಸಿರಲಿಲ್ಲ. ಇನ್ನೂ ತೀರಿಸಿಲ್ಲದ ಸಾಲದ ಹೊರೆಯಿಂದಾಗ ಎದೆಯಲ್ಲಿ ಅಪರಾಧಿ ಪ್ರಜ್ಞೆ ಚುಚ್ಚುತ್ತಿತ್ತು. ಅವರೆಲ್ಲರಿಗೂ ಒಂದೊಂದು ಪೈಸೆಯೂ ಬಿಡದಂತೆ ಸಾಲ ತೀರಿಸಲು ಬಯಸಿದ್ದರು. ಹಾಗೆಂದೇ ಹಗಲು ರಾತ್ರಿ ದುಡಿದು ಗಳಿಸಲು ತೊಡಗಿದ್ದರು. ಅವರ ಆರ್ಥಿಕ ಸ್ಥಿತಿಯಲ್ಲಿ ಬಾಡಿಗೆಗೆ ಅಂಗಡಿ ತೆಗೆದುಕೊಳ್ಳುವುದು ಅಸಾಧ್ಯವಿತ್ತು. ಬೀದಿ ಬದಿಯಾದರೂ ಸರಿ, ತನ್ನ ಉದ್ಯಮವನ್ನು ನೆಲೆ ನಿಲ್ಲಿಸಲು ಬಯಸಿದ್ದರು. ಸಂಬಂಧಿಕರ ಅಸಮಾಧಾನಕ್ಕೂ ಕಿವಿಗೊಡಲಿಲ್ಲ. ಬೀದಿ ವ್ಯಾಪಾರವಾದರೇನು, ಪ್ರಾಮಾಣಿಕ ದುಡಿಮೆಗೆ ನಾಚಿಕೆ ಏಕೆ? ಕೆಲವೊಮ್ಮೆ ಮುದುಡುವ ಮನಸ್ಸನ್ನು ಸಂತೈಸಿ ಸಮಾಧಾನ ಮಾಡಿಕೊಳ್ಳುತ್ತಿದ್ದರು.

* * *

ಭಾವೇಶ್ ಅವರ ಪರಿಶ್ರಮ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಹೋಯಿತು. ಕೆಲವೊಮ್ಮೆ ವಾರಾಂತ್ಯದಲ್ಲಿ ಮತ್ತು ಪ್ರವಾಸಿ ಕಾಲದಲ್ಲಿ ಒಳ್ಳೆಯ ವ್ಯಾಪಾರವಾಗಿ, ಒಂದೇ ವಾರಕ್ಕೆ ತರಿಸಿಕೊಂಡ ಕಚ್ಚಾ ಮಾಲು ಖಾಲಿಯಾಗುತ್ತಿತ್ತು. ಹೆಚ್ಚು ಹಣ ಬಂದ ಹಾಗೆ, ಹೊಸ ಹೊಸ ಬಗೆಯ ವಿವಿಧ ವಿನ್ಯಾಸದ ಅಚ್ಚುಗಳನ್ನು ತಯಾರಿಸುವುದರಲ್ಲಿ ಆ ಹಣವನ್ನು ತೊಡಗಿಸುವರು. ಮುಂಬಯಿಯ ಬೋರಿವಲಿಯ ಗೋರಾಯಿ ರಸ್ತೆಯಲ್ಲಿ ಅವರ ಅಚ್ಚು ತಯಾರಕ ಇದ್ದರು. ಆತನ ಒಳ್ಳೆಯ ಪರಿಚಯ ಇಷ್ಟರಲ್ಲಾಗಲೆ ಭಾವೇಶ್ ಅವರಿಗೆ ಆಗಿತ್ತು. ಆತನಿಂದ ಎಷ್ಟೆಲ್ಲ ಅಚ್ಚುಗಳು ಸಿಗುತ್ತಿದ್ದವೋ ಅಷ್ಟನ್ನೂ ಕೊಳ್ಳಲು ಪ್ರಯತ್ನಿಸುತ್ತಿದ್ದರು. ಹತ್ತು ಹನ್ನೆರಡು ಅಚ್ಚುಗಳನ್ನು ಒಟ್ಟಿಗೆ ಕೊಳ್ಳುವುದರಿಂದ, ಆ ಅಚ್ಚು ಮಾಡುವಾತನೊಡನೆ ಒಳ್ಳೆಯ ಸಂಬಂಧ ಬೆಳೆದಿತ್ತು. ಮುನ್ನಡೆದಂತೆ, ಸೀಜನಲ್ ಕ್ಯಾಂಡಲ್‌ಗಳ ಅಚ್ಚಿನತ್ತ ಗಮನ ಹರಿಸಿದರು. ಅಬ್ದುಲ್ ಭಾಯಿ ಇದೆಲ್ಲದರಲ್ಲಿ ಬಹಳಷ್ಟು ಸಹಾಯ ಮಾಡಿದರು. ಅಬ್ದುಲ್ ಅವರು 'ಬರೀ ಕ್ಯಾಸ್ಟಿಂಗ್ ಅಚ್ಚಿನ ಮೇಲೇ ಅವಲಂಬಿಸಬೇಡ, ಮಣ್ಣಿನ, ಅಲ್ಯುಮಿನಿಯಂನ ಹಾಗೂ ರಬ್ಬರಿನ ಅಚ್ಚುಗಳನ್ನೂ ಪ್ರಯೋಗಿಸಿ ನೋಡು' ಎಂದು ಸಲಹೆ ಕೊಟ್ಟರು. ಇದು ತುಂಬಾ ಉಪಯುಕ್ತ ಸಲಹೆ ಆಗಿತ್ತು. ಶೀಘ್ರದಲ್ಲಿಯೇ ಭಾವೇಶ್ ಅಂತಹ ಅಚ್ಚುಗಳನ್ನು ತಯಾರಿಸುವವರನ್ನು ಹುಡುಕಿದರು.

ಮುಂಬಯಿಯ ಹೀರಾ ಪನ್ನಾ ಮಾರ್ಕೆಟಿನಲ್ಲಿ 'ಮಹಾಲಕ್ಷ್ಮಿ ಡೈಸ್' ಹೆಸರಿನ ಬಹಳ ದೊಡ್ಡ ಅಂಗಡಿ ಇದೆ. ಅಲ್ಲಿ ಅಚ್ಚು ತಯಾರಿಕೆಯ ಬಗ್ಗೆ ತರಪೇತು ಕೂಡ ನೀಡುತ್ತಾರೆ. ಆ ಅಂಗಡಿಯ ಮಾಲೀಕರೊಡನೆ ಭಾವೇಶ್ ಅವರ ಸಂಪರ್ಕ ಬೆಳೆದಾಗ, ಅವರಿಗೆ ತಿಳಿಯಿತು, ಆ ಮಾಲೀಕರಿಗೆ ಕಾಲಿನಲ್ಲಿ ಕೊಂಚ ತೊಂದರೆ ಇದೆ. ದಿನವೆಲ್ಲ ಅಂಗಡಿಯಲ್ಲಿ ಕುಳಿತೂ ಕುಳಿತೂ ಅವರ ಕಾಲುಗಳು ಬಹಳವಾಗಿ ನೋಯುತ್ತಿದ್ದವು. ಭಾವೇಶ್ ಅವರು ಎನ್.ಎ.ಬಿ.ನಲ್ಲಿ ಕಲಿತ 'ಫುಟ್ ರಿಫ್ಲೆಕ್ಸಾಲಜಿ' ಇಲ್ಲಿ ಸಹಾಯಕ್ಕೆ ಒದಗಿತು.

ಭಾವೇಶ್ ಅವರ ಕಾಲುಗಳಲ್ಲಿ ಕೆಲವು ಬಿಂದುಗಳಲ್ಲಿ ಒತ್ತಿದರು. ಅದರಿಂದ ಅವರಿಗೆ ಸಾಕಷ್ಟು ಆರಾಮ ಸಿಕ್ಕಿತು, ನೋವಿನಿಂದ ಬಿಡುಗಡೆ ಆಗಿತ್ತು. ಅವರ ಅಂಗಡಿಗೆ ಹೋದಾಗಲೆಲ್ಲ, ಭಾವೇಶ್ ಮೊದಲು ಅವರ ಕಾಲುಗಳ ಬಗ್ಗೆ ವಿಚಾರಿಸುತ್ತಿದ್ದರು. ಅವರ ಕಾಲಿಗೆ ಚಿಕಿತ್ಸೆ ಮಾಡಿ, ನಂತರ ಬಂದ ಕೆಲಸಕ್ಕೆ ತೊಡಗುತ್ತಿದ್ದರು. ಹೀಗಾಗಿ ಆ ಹಿರಿಯರು ಭಾವೇಶ್ ಅವರಿಗೆ ಒಳ್ಳೆಯ ಸ್ನೇಹಿತರಾದರು. ಭಾವೇಶ್ ತಾವು ಮಾಡುವ ಯಾವುದೇ ಕೆಲಸವನ್ನೂ ಮನಸ್ಸಿಟ್ಟು ಮಾಡುವರು. ಇತರರ ಒಳಿತಿಗೆ ಮಾಡುತ್ತಾ ಹೋದರು. ಮನಸ್ಸಿನಲ್ಲಿ ಲೋಭವಿರಲಿಲ್ಲ. ಆದರೆ ನಾವು ಇತರರಿಗೆ ಏನು ಕೊಡುತ್ತೇವೆಯೋ, ಅದು ಹತ್ತು ಪಟ್ಟು, ನೂರು ಪಟ್ಟು ನಮಗೇ ಹಿಂತಿರುಗುತ್ತದೆ. ಭಾವೇಶ್ ಅವರ ಬದುಕು ಇದಕ್ಕೆ ಉದಾಹರಣೆಯಾಗಲಿತ್ತು.

(ಸಶೇಷ)